2) ಖರ್ಚು

1.	ತೋಟಗಳ ನಿರ್ವಹಣೆ, ಮೂರ್ತೆದಾರರ ಕೂಲಿ ಕಾರ್ಮಿಕರ ಕಲ್ಯಾಣ ವೆಚ್ಚಗಳು ಇತ್ಯಾದಿ.	624.85
2.	ತಯಾರಿಕಾ ವೆಚ್ಚಗಳಾದ ಸಂಸ್ಕರಣೆ, ದುರಸ್ಥಿ (ಕೆ.ಇ.ಬಿ.(ಶಕ್ತಿ) ಡ್ರಮ್ಮುಗಳು ಹಾಗೂ ಮೆಷಿನರಿಗಳ ದುರಸ್ಥಿ ನಿರ್ವಹಣೆ ಇತ್ಯಾದಿಗಳು.	583.63
3.	ಸಿಬ್ಬಂದಿಗಳ ಸಂಬಳ, ಬೋನಸ್ಸು, ಭವಿಷ್ಯ ನಿಧಿ, ಕಛೇರಿ ಬಾಡಿಗೆ, ನೀರಿನ, ವಿದ್ಯುಚ್ಚಕ್ತಿ ವಾಹನ ನಿರ್ವಹಣಾ ವೆಚ್ಚ, ಸರಬರಾಜು, ಅಂಚೆ ದೂರವಾಣಿ ಆಸ್ಪತ್ರೆ ಕಟ್ಟಡಗಳ ದುರಸ್ಥಿ ನಿರ್ವಹಣೆ ಇವೇ ಮುಂತಾದ ವೆಚ್ಚಗಳು.	3876.35
	ಒಟ್ಟು	5084.83
4.	ಮರು ನಾಟಿಗೆ ಯೋಜನೆಯ ವೆಚ್ಚಗಳು ಮೂರ್ತೆಗೆ ಬಾರದೆ ಇರುವ ರಬ್ಬರ್ ತೋಟಗಳ ನಿರ್ವಹಣೆ ರಸ್ತೆ ಹಾಗೂ ಸೇತುವೆಗಳ ನಿರ್ವಹಣೆ ಹೊಸ ವಾಹನ ಖರೀದಿ, ಪ್ರಯೋಗ ಶಾಲೆಯ ವೆಚ್ಚಗಳು ಇತ್ಯಾದಿ ವೆಚ್ಚಗಳು.	714.95

ಪುತ್ತೂರು ತಾಲ್ಲೂಕಿನ ಜಾನುವಾರು ಸಂವರ್ಧನಾ ಕೇಂದ್ರದ ಬಗ್ಗೆ

1665 (2313) ಶ್ರೀ ಅಂಗಾರ ಎಸ್ (ಸೂಳ್ಯ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಒಳಗೆ ಬರುವ ಪುತ್ತೂರು ತಾಲ್ಲೂಕಿನ ಕ್ಯೊಲಾ ಜಾನುವಾರು ಸಂವರ್ಧನಾ ಕೇಂದ್ರದಲ್ಲಿ ಯಾವ ಯಾವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ ಪ್ರತಿ ಕಾರ್ಯಕ್ರಮಕ್ಕೆ ತಗಲುವ ಖರ್ಚು ಬರುವ ಆದಾಯವೆಷ್ಟು?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು).

ಅಭಿವೃದ್ಧಿ ಕಾರ್ಯ ಕ್ರಮಗಳ ಅನುಷ್ಠಾನ	ಖರ್ಚು (99-2000) ಲಕ್ಷ ರೂ.ಗಳಲ್ಲಿ	ಆದಾಯ (99-2000) ಲಕ್ಷ.ರೂ.ಗಳಲ್ಲಿ
1) ಹಂದಿ ತಳಿ ಅಭಿವೃದ್ಧಿ	3.25	0.51
2) ಮಿಶ್ರ ತಳಿ ಹಸುಗಳ ಅಭಿವೃದ್ಧಿ	8.27	5.05
3) ಗಿರಿರಾಜ ಕೋಳಿ ಮರಿ ಸಾಕಣೆ	0.70	0.72
4) ಮೇವು ಅಭಿವೃದ್ಧಿ	2.60	0.30
ಒಟ್ಟು	14.82	6.58